ಸಹೋದರರ ನಡುವೆ, ತಂದೆತಾಯಿ ಮತ್ತು ಮಕ್ಕಳ ನಡುವೆ, ರಾಜ್ಯ ಮತ್ತು ರಾಜರ ನಡುವೆ ಇತ್ಯಾದಿ. ಈ ಅಗಲುವಿಕೆ ಇದೆ. ಕೊನೆಗೆ ಸೀತೆ ಭೂಮಿಯಲ್ಲಿ ಸೇರಿಕೊಳ್ಳುವವರೆಗೆ. ಇದು ಕೂಡ ಅಗಲುವಿಕೆಯೆ. ನಿರಂತರವಾದ ಅಗಲುವಿಕೆಗಳು ಇರೋದರಿಂದ ಇದು ಕರುಣರಸದ ಕಾವ್ಯ ಅಂತ. ಇದು ಬೌದ್ಧಿಕವಾದ ಗ್ರಹಿಕೆ ಅಷ್ಟೆ. ಓದಿದಾಗ್ಲಂತೂ ನಾನು ಭಾಳ ಥ್ರಿಲ್ ಆಗಿದ್ದೆ. ಯೆಂಗ್ ಮೈಂಡ್ ಆಗಿದ್ರಿಂದ ಥ್ರಿಲ್ ಆಗಿದ್ದೆ. ಕಾಳಿದಾಸ ಕೂಡ ನಿರಂತರವಾದ ಅಗಲುವಿಕೆಯನ್ನು ಕುರಿತೇ ಬರೆದಿದ್ದಾನೆ. ಅದು 'ಮಾಲವಿಕಾಗ್ನಿಮಿತ್ರ'ದ ಕತೆ ಇರಬಹುದು, ಊರ್ವಶಿ ಮತ್ತು ಪುರೂರವರ ಕಥೆ ಇರಬಹುದು, ಶಾಕುಂತಲವೇ ಇರಬಹುದು, ಮೇಘದೂತ ಅಂತೂ ಸಪರೇಶನ್ನಿನ ಕತೆಯೇ ಆಗಿದೆ. ಇವುಗಳನ್ನೆಲ್ಲ ಓದುವಾಗ, ಪಾಠಮಾಡುವಾಗ ಅನಿಸಿದ್ದೇನಂದ್ರೆ, ರಸ ಅನ್ನೋದು ಓದುಗರಿಗೆ ಒಂದು ಅನುಭವ ಆಗೋದು ಶ್ರವ್ಯಕಾವ್ಯಗಳಲ್ಲಿ ಅಸಾಧ್ಯ. ದೃಶ್ಯಕಾವ್ಯಗಳಲ್ಲಿ ಮಾತ್ರ ಇದು ಸಾಧ್ಯ ಆಗಬಹುದು. ರಸಧ್ವನಿ ಅಂತ ಏನಿದೆ ಅದನ್ನು ಕೂಡ ಬಳಸಿಕೊಳ್ಳೋದಕ್ಕೆ ಆಗೋದಿಲ್ಲ. ಗುಣೀಭೂತವ್ಯಂಗ್ಯ ಒಂದು ಸಾಧ್ಯವಾಗಬಹುದು. ಧ್ವನಿ ಕೂಡ ಒಂದು ಮಿತಿಯೊಳಗೆ ಮಾತ್ರ ನಿಜ.

◆ **ಯಾವುದೇ ಕೃತಿಗೆ ಸಾರ್ವತ್ರಿಕ ಗುಣ ಇರೋದಿಲ್ಲ ಅಥವಾ ಸಾರ್ವತ್ರಿಕ ನೆಲೆ ಇರೋದಿಲ್ಲ. ಪ್ರತಿಯೊಂದು ಕೃತಿ ಕೂಡ ಕಾಲದೇಶಬದ್ಧವಾದದ್ದು. ಸಾರ್ವತ್ರಿಕತೆ ಅನ್ನುವಂಥದ್ದು ಒಂದು ಭ್ರಮೆ ಅನ್ನೋ ಒಂದು ಮನಸ್ಥಿತಿ ನಿಮ್ಮ ಹಲವಾರು ಲೇಖನಗಳಲ್ಲಿ ಕಂಡುಬರ್ತದೆ.**

ಸಾರ್ವಕಾಲಿಕತೆ ಅನ್ನೋದು ಎಲ್ಲಾ ಕಾಲಕ್ಕೂ ಇತ್ತಾ ಅನ್ನೋದು ಬೇರೆ. ಆದರೆ ಎಲ್ಲಾ ಕಾಲಕ್ಕೂ ಬೇಕಾಗುತ್ತೆ. ಒಂದು ಕಾಲಕ್ಕೆ ಹೇಗೆ ಬೇಕಾಗ್ತದೊ ಹಾಗೆಯೇ ಇನ್ನೊಂದು ಕಾಲಕ್ಕೆ ಬೇಕಾಗದೇ ಇರಬಹುದು. ಆ ಅರ್ಥದಲ್ಲಿ ಅದು ದೇಶಕಾಲಬದ್ಧ. ಪಂಪನನ್ನು ನಾನು ಓದೋದಾದರೆ ಇಪ್ಪತ್ತನೇ ಶತಮಾನದವನಾಗಿಯೇ ಓದ್ತೇನೆ. ಹತ್ತನೇ ಶತಮಾನದವನಾಗಿ ಓದೋಕಾಗೋದಿಲ್ಲ. ಹತ್ತನೇ ಶತಮಾನದಲ್ಲಿ ಅದು ಯಾವುದಕ್ಕೆ ಉಪಯುಕ್ತವಾಗಿತ್ತೋ ಆ ಉಪಯುಕ್ತತೆ ಹದಿನೈದನೇ ಶತಮಾನಕ್ಕೆ ಇರಲಿಕ್ಕಿಲ್ಲ. ಮುಂದೆ ಇಪ್ಪತ್ತನೇ ಶತಮಾನಕ್ಕೆ ಆ ಉಪಯುಕ್ತತೆ ಮತ್ತೆ ಬದಲಾಗ್ತದೆ. ನನ್ನ ಕಾಲದ ಓದುಗನಾಗಿಯೇ ಓದ್ತಾ ಇರ್ತೇನೆ. ಇದೇ ದೇಶಕಾಲಬದ್ಧ. ಎಲ್ಲಾ ಕಾಲಕ್ಕೂ ಸಲ್ಲುವ ಮೌಲ್ಯವೊಂದು ಇರೋದಿಲ್ಲ. ಎಲ್ಲಾ ಕಾಲಕ್ಕೂ ಸಲ್ಲುತ್ತದೆ ಯಾಕಂದ್ರೆ, ತನ್ನ ಕಾಲದ ಅರ್ಥಗಳನ್ನು ಅದರಲ್ಲಿ ಕಾಣಬಹುದು. ಇವತ್ತು ನಾನು ಓದಿದ್ರೆ ಪಂಪ ನನಗೆ ರೆಲೆವೆಂಟ್ ಅನ್ನುತ್ತೆ. ಕಾರಣ ನನ್ನ ಕಾಲ ಮತ್ತು ಪಂಪನ ಸಂಬಂಧ. ತುಂಬಾ ಜನ ಪಂಪನನ್ನ ರಾಜತ್ವ ವಿರೋಧಿ ನೆಲೆಯಲ್ಲಿ ನೋಡ್ತಾ ಇದ್ರು. ಇಲ್ಲವೆ, ವೈದಿಕ ಪರಂಪರೆಯನ್ನ ನಿರಾಕರಿಸಿದ ನೆಲೆಯಲ್ಲಿ ಓದ್ತಾ ಇದ್ರು. ಇದು ಇಪ್ಪತ್ತನೇ ಶತಮಾನದ ಗ್ರಹಿಕೆ. ಅಂದ್ರೆ ಇಪ್ಪತ್ತನೇ ಶತಮಾನದ ಗ್ರಹಿಕೆಗೆ ಬೇಕಾದ ಸೂಚನೆಗಳು ಅಥವಾ ನೆಲೆಗಳು ಪಂಪನಲ್ಲಿ ದೊರಕುತ್ತಾ ಇವೆ. ಆ ಅರ್ಥದಲ್ಲಿ ಅದು ಈ ಕಾಲಕ್ಕೆ ಬದ್ಧ. ನಾನು ಹತ್ತನೇ ಶತಮಾನದ ಓದುಗನಾಗಿ ಆಗ್ಲಿ ಅಥವಾ ಸಾಮಾಜಿಕ ಹಿನ್ನೆಲೆಯಲ್ಲಿ ಆಗ್ಲಿ ಪಂಪನನ್ನ ಓದೋದಿಕ್ಕೆ ಆಗೋದಿಲ್ಲ. ಈಗ 'ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡಲಿ ಬಡವನಯ್ಯ' ಅನ್ನೋ ವಚನವಿದೆ. ಅಲ್ಲಿನ ಕ್ರೈಸಿಸ್ ಅನ್ನು ನೀವು ಬಸವಣ್ಣನವರದು ಅಂತ ನೋಡ್ತಿರೊ ಅಥವಾ ನಿಮ್ಮದು ಅಂತ ನೋಡ್ತಿರೊ. ಬಸವಣ್ಣ ಹೇಳೋದಿಕ್ಕೆ ಕಾರಣ ಏನೋ ಇರಬಹುದು. ಇದನ್ನ ಅರ್ಥ ಮಾಡಿಕೊಳ್ಳೊದಿಕ್ಕೆ ಬೇರೆ ಪರಿಕರಗಳನ್ನು ನೋಡಬಹುದು. ಅಂದ್ರೆ ಆ ಕಾಲದಲ್ಲಿ ಕಲ್ಯಾಣಿ ಚಾಲುಕ್ಯರು ಹೆಚ್ಚಿನ ದೇವಾಲಯಗಳ ನಿರ್ಮಾಣಕ್ಕೆ ಇಳಿದಿದ್ರಾ. ದೇವಾಲಯಗಳನ್ನು ಸ್ಥಾವರಗಳೆಂದು ವಿರೋಧಿಸೋದಿಕ್ಕೆ ಇದೆಲ್ಲಾ ಆಯ್ತಾ ಅನ್ನೋದೆಲ್ಲ ಬೇರೆ ವಿಚಾರ. ನನಗೆ ಇವತ್ತಿನ ನೆಲೆಗಳು ಕೂಡ ಮುಖ್ಯ. ದೇವಾಲಯಗಳನ್ನು ಪುನರುಜ್ಜೀವನ ಮಾಡುವ ಧರ್ಮಸ್ಥಳದವರೂ ನೆನಪಾಗ್ತಾರೆ. ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಹಣ ಕೊಡ್ತಾ ಇರುವವರೂ ಇದ್ದಾರೆ. ನಾನು ಒಂದು ಐಡಿಯಾ ಆಗಿ ದೇವಾಲಯಗಳನ್ನ ವಿರೋಧಿಸ್ತೇನೆ. ಜಂಗಮ ಕಲ್ಪನೆ ನನ್ನದು. ಬೇಕಾಗಿಲ್ಲ ನನಗೆ ಇವು. ನಾನು ಗ್ರಹಿಸ್ತಾ ಇರೋದು ನನ್ನ ಕಾಲದಲ್ಲಿ ನಿಂತು. ಈ ವಚನ ಬಸವಣ್ಣನ ವೈಯಕ್ತಿಕ ಕ್ರೈಸಿಸ್ ಆಗಿತ್ತಾ?